

**ಬಾಂಗ್ಲಾದೇಶದ ಪಿರೋಜ್‌ಪುರದ ಸ್ವರೂಪ್‌ಕಾಥಿಯ ಹೆಸರಿನ 'ತೇಲುವ ಸೀಬೆ ಮಾರುಕಟ್ಟೆ'ಗೆ ಶತಮಾನಕ್ಕೂ ಹೆಚ್ಚಿನ ಇತಿಹಾಸವಿದೆ. ಸುಮಾರು 125 ವರ್ಷಗಳ ಹಿಂದೆ ನಸರಾಬಾದ್ ಉಪಜಿಲಾ ಪ್ರಾಂತ್ಯದ ಪುರ್ನೊ ಮೊಂಡಲ್ ಎಂಬ ವ್ಯಕ್ತಿ ತನ್ನ ಹಳ್ಳಿಯಲ್ಲಿ ಆರಂಭಿಸಿದ ಸೀಬೆ ಕೃಷಿ ಕ್ರಮೇಣ ದೇಶದಾದ್ಯಂತ ಜನಪ್ರಿಯಗೊಂಡಿತು. ಪ್ರಸ್ತುತ ಬಾಂಗ್ಲಾದ ಪ್ರಮುಖ ತೋಟಗಾರಿಕೆ ಬೆಳೆಗಳಲ್ಲಿ ಸೀಬೆಯೂ ಒಂದಾಗಿದೆ. ಸಂಪರ್ಕ ಮತ್ತು ಸಂವಹನ ವ್ಯವಸ್ಥೆ ಎಷ್ಟೇ ಆಧುನಿಕಗೊಂಡರೂ ಸೀಬೆಹಣ್ಣಿನ ತೇಲುವ ಮಾರುಕಟ್ಟೆ ಈಗಲೂ ಅಸ್ತಿತ್ವದಲ್ಲಿದೆ. ನದಿಯಲ್ಲಿ, ನೂರಾರು ದೋಣಿಗಳಲ್ಲಿ ಸೀಬೆಹಣ್ಣುಗಳು ತುಂಬಿರುವ ದೃಶ್ಯವನ್ನು ನೋಡುವುದೇ ಒಂದು ವಿಶಿಷ್ಟ ಅನುಭವ.**

ಹಣ್ಣುಗಳೇ ಕಾಣಿಸುತ್ತಿದ್ದವು. ಸೈಕಲ್‌ನವನ ಪೋಂ ಪೋಂ... ಸದ್ದು ಯುದ್ಧಕ್ಕೆ ಸನ್ನದ್ಧರಾಗುವ ಸೈನಿಕರಂತೆ ನಮ್ಮ ಪಂಚೇಂದ್ರಿಯಗಳೆಲ್ಲ ನಿಮಿರಿ ನಿಲ್ಲುತ್ತಿದ್ದವು. ಪೇರಲೆ ಹಣ್ಣಿನ ಬೀಜಗಳು ತುಂಬಾ ಚಿಕ್ಕದಾಗಿರುತ್ತಿದ್ದುದರಿಂದ ನಾವು ಆದಷ್ಟು ಜಾಗ್ರತೆಯಲ್ಲಿ ಬೀಜ ಹೊಟ್ಟೆಯೊಳಗೆ ಹೋಗದಂತೆ ಬಿಡಿಸಿ ತಿನ್ನುತ್ತಿದ್ದೆವು. ಬೀಜ ಎಲ್ಲಿ ಹೊಟ್ಟೆಯಲ್ಲಿ ಮರವಾಗಿ ಬೆಳೆಯುತ್ತದೆಯೋ ಎಂಬ ಭಯ!

ಈ ಪೇರೂಕಾಯಿ ಎಂಬ ಸೀದಾ ಸಾದಾ ಬಡವರ ಹಣ್ಣಿಗೆ ಎಷ್ಟೊಂದು ಹೆಸರುಗಳು? ಕರ್ನಾಟಕದ ಮೂವತ್ತು ಜಿಲ್ಲೆಗಳಲ್ಲಿ ಇಪ್ಪತ್ತು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ಪೇರಲ, ಚೇಪೆ, ಪ್ಯಾರಲ, ಬಿಕ್ಕೆ, ಸೀಬೆ – ಎಷ್ಟೊಂದು ವೈವಿಧ್ಯಮಯ ಹೆಸರುಗಳು !? ಭಾಷೆಯೊಂದಿಗೆ ಬದಲಾಗುವ ಸಂಸ್ಕೃತಿ, ಆಹಾರ ಶೈಲಿ, ಅಡುಗೆ ತೊಡುಗೆ, ನಿಜವಾಗಿಯೂ ಇದೊಂದು ಪೇರಲ ಹಣ್ಣಿನ ಬಹುನಾಮದ ಭಾರತದ ಸಂಕೇತ.

ಬಾಲಿವುಡ್‌ನ 'ದೇವದಾಸ' ಸಿನಿಮಾದಲ್ಲಿ ಪಾರೋಳ ತಾಯಿ ಸುಮಿತ್ರಾ ತನ್ನ ಮಗಳನ್ನು ದೇವದಾಸನಿಗೆ ಸಂಬಂಧ ಕೇಳಲು ಬರುವ ದೃಶ್ಯ ನೆನಪಿಸಿಕೊಳ್ಳಿ. ಜಮೀನ್ದಾರಿ ಠಾಕೂರ್ ಮನೆತನದ ದೇವದಾಸನ ತಾಯಿ ಕೌಸಲ್ಯ ಆ ಸಂಬಂಧವನ್ನು ಕಾಲು ಕಸವೆಂಬಂತೆ ತಿರಸ್ಕರಿಸುತ್ತಾಳೆ. ಪಾರ್ವತಿಯ ಕುಟುಂಬದ ಕೀಳುಜಾತಿಯನ್ನು ಹಂಗಿಸಿ, 'ಚಿಕ್ಕವಳಿದ್ದಾಗ ಪಾರ್ವತಿ ನಮ್ಮ ತೋಟದಲ್ಲಿ ಪೇರಲಹಣ್ಣು ಕದಿಯುತ್ತಿದ್ದಳು. ಈಗ ನನ್ನ ಮಗ ದೇವದಾಸನನ್ನು ಕದಿಯಲು ಬಂದಿದ್ದಾಳೆ' ಎಂದು ಕೆಟ್ಟ ಪದಗಳಿಂದ ಹೀಯಾಳಿಸುತ್ತಾಳೆ. ಆಗ ಪಾರೋಳ ತಾಯಿ ಸುಮಿತ್ರಾ, 'ನಿಮ್ಮ ತೋಟದಿಂದ ನನ್ನ ಮಗಳು ಕದ್ದ ಹಣ್ಣಿಗಿಂತ ದುಪ್ಪಟ್ಟು ಹಣ್ಣುಗಳನ್ನು ನನ್ನ ಕೈಯಾರೆ ನಿನ್ನ ಮಗ ದೇವದಾಸನಿಗೆ ತಿನ್ನಿಸಿದ್ದೇನೆ' ಎಂದು ಉತ್ತರಿಸುವುದರ ಜೊತೆಗೆ, ಕೌಸಲ್ಯಳ ಕುಲೀನ ಮನೆತನಕ್ಕೆ ಶಾಪ ಹಾಕುತ್ತಾಳೆ; ನಿಮಗಿಂತ ದೊಡ್ಡ ಮನೆತನದ ಮನೆಗೆ ನನ್ನ ಮಗಳನ್ನು ಕೊಟ್ಟು ಮದುವೆ ಮಾಡುತ್ತೇನೆಂದು ಸವಾಲು ಹಾಕುತ್ತಾಳೆ. ಆದರೆ, ದೂರದ ಜಮೀನ್ದಾರಿ ಮನೆತನದ ಹಿರಿಯ ಠಾಕೂರನೊಂದಿಗೆ ಎರಡನೆಯ ಮದುವೆ ಮಾಡುವ ಮೂಲಕ ಪಾರೋಳ ಬದುಕು ದುರಂತವಾಗುತ್ತದೆ. ಅತ್ತ ಪಾರೋಳ ನೆನಪಿನಲ್ಲೇ ದೇವದಾಸ ಕುಡಿದು ಕುಡಿದು ಹಾಳಾಗುವ ಅನೇಕ ತಿರುವುಗಳನ್ನು ಪಡೆವ ಕಥೆ, ವಿರಹಿಗಳ ಪಾಲಿಗೆ ಒಂದು ರೂಪಕವಾಗಿ ಉಳಿಯುತ್ತದೆ.

ಕಲಕತ್ತೆಯಲ್ಲಿ ಜಮೀನ್ದಾರಿ ಪದ್ಧತಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲವದು. ಆ ವಿಷಮ ವಾತಾವರಣದಲ್ಲಿ ಶರಚ್ಚಂದ್ರ ಚಟ್ಟೋಪಾಧ್ಯಾಯ ರಚಿಸಿದ 'ದೇವದಾಸ' (1917) ಕಾದಂಬರಿ ಬಹುತೇಕ ಭಾರತೀಯ ಭಾಷೆಗಳಲ್ಲಿ ಸಿನಿಮಾ ಆಗಿ ತೆರೆ ಕಂಡು ಅದ್ಭುತ ಯಶಸ್ಸು ಪಡೆದಿದೆ. ಈಗಲೂ ವಿಫಲ ಪ್ರೇಮಿಯನ್ನು ನಾವು 'ಅವನು ದೇವದಾಸ' ಎಂದು ಕರೆಯುವಷ್ಟರ ಮಟ್ಟಿಗೆ 'ದೇವದಾಸ' ಕಾದಂಬರಿ–ಸಿನಿಮಾ ಭಾರತದಲ್ಲಿ ಜನಪ್ರಿಯವಾಗಿದೆ, ಜನಪದವಾಗಿದೆ. 'ದೇವದಾಸ' ಕಾದಂಬರಿಯ ಹಿನ್ನೆಲೆಯಲ್ಲಿ, ಪೇರಲೆ ಹಣ್ಣು ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿ ಎಲ್ಲ ವರ್ಗಗಳ ಜನರು ತಿನ್ನುವ ಒಂದು ಜನಪ್ರಿಯ ಹಣ್ಣಾಗಿತ್ತು.